# ಐಎಎಸ್ ಕಣ್ಣೆದುರಿನ ಕನಸು...

**ಮೇಘಾ ಶೆಟ್ಟಿ**
**ಝೀ ಕನ್ನಡದ 'ಜೊತೆ ಜೊತೆಯಲಿ'ಯ ಅನು**



◆ **ಟಿಕ್ ಟಾಕ್‌ನಲ್ಲಿ ನೀವು ಮಾಸ್ಟರ್ ಅಂತೆ ..?**

ಬಿಡುವಿನ ವೇಳೆಯಲ್ಲಿ ಟಿಕ್ ಟಾಕ್ ಮಾಡುತ್ತಿರುತ್ತೇನೆ. ಅದು ಒಂಟಿತನವನ್ನು ದೂರಮಾಡಲು ಅನುಕೂಲವಾಗುತ್ತದೆ. ಮಾತ್ರವಲ್ಲ, ಒಬ್ಬ ಕಲಾವಿದೆಯಾಗಿ ಅಭಿನಯವನ್ನು ಅಭ್ಯಾಸ ಮಾಡುವ ತಾಲೀಮು ತಾಣ ಕೂಡ ಇದಾಗುತ್ತದೆ. ನಾನು ಟಿಕ್ ಟಾಕ್‌ಅನ್ನು ಕೇವಲ ಟೈಂಪಾಸಿಗಾಗಿ ಮಾಡುವುದಿಲ್ಲ. ಇದರಿಂದ ನನ್ನ ನಟನೆಗೆ ನೆರವು ಆಗುತ್ತಿದೆ ಎನ್ನುವುದು ಸ್ಪಷ್ಟ. ನನಗೆ ನಟನೆ ಎಂಬ ಬಣ್ಣದ ಲೋಕದ ವೃತ್ತಿ ಬದುಕು ಆರಂಭವಾಗಿದ್ದೇ ಸಾಮಾಜಿಕ ಮಾಧ್ಯಮಗಳ ಮೂಲಕ. ಮೊದಲು ಇನ್‌ಸ್ಟಾಗ್ರಾಮ್‌ನಲ್ಲಿ ಅಭಿನಯಕ್ಕೆ ಆಹ್ವಾನ ಬಂತು. ನಾನಾಗ ಎಂಬಿಎ ಅಂತಿಮ ವರ್ಷದಲ್ಲಿ ಓದುತ್ತಿದ್ದೆ. ಹೀಗಿರುವಾಗ ನಮ್ಮ ಕುಟುಂಬದ ಸದಸ್ಯರ ಪ್ರೋತ್ಸಾಹದಿಂದ ನೋಡೋಣ ಒಂದು ಪ್ರಯತ್ನ ಎಂದು ಪ್ರವೇಶ ಮಾಡಿದೆ. ಈ ಕ್ಷೇತ್ರ ನನ್ನನ್ನು ಸ್ವೀಕರಿಸಿ ಪೋಷಿಸುತ್ತಿದೆ.

◆ **ನಿಮ್ಮ ಬಾಲ್ಯದ ಕನಸು ಏನಿತ್ತು?**

ಐಎಎಸ್ ಮಾಡಬೇಕು ಎನ್ನುವುದು ನನ್ನ ಬಹುದಿನಗಳ ಆಸೆ. ಆಕಸ್ಮಿಕವಾಗಿ ಬಣ್ಣದ ಲೋಕ ಪ್ರವೇಶ ಮಾಡಿದ್ದೇನೆ. ಹಾಗೆಂದ ಮಾತ್ರಕ್ಕೆ ನನ್ನ ಮನಸಿನಿಂದ ಐಎಎಸ್ ಕನಸು ಮಾಸಿಲ್ಲ. ಅವೆರಡನ್ನೂ ಜೊತೆಯಾಗಿಯೇ ತೆಗೆದುಕೊಂಡು ಹೋಗುವ ಯೋಚನೆ ಕೂಡ ಇದೆ. ಮುಂದೆ ಎರಡನ್ನೂ ಜೊತೆ ಜೊತೆಗೆ ತೆಗೆದುಕೊಂಡು ಹೋಗಬೇಕಿದೆ. ನಾಗರಿಕ ಸೇವಾ ಪರೀಕ್ಷೆ ಅಪಾರ ಸಮಯವನ್ನು ಬಯಸುತ್ತದೆ. ಸದ್ಯ ಟೀವಿಗೆ ಟೈಮ್ ಸಾಕಾಗುತ್ತಿಲ್ಲ. ನಿತ್ಯವೂ ಪ್ರಸಾರ ಆಗುವ ಧಾರಾವಾಹಿ ಆಗಿದ್ದರಿಂದ ಸಾಕಷ್ಟು ಕಂತುಗಳು ಬ್ಯಾಂಕಿಂಗ್ ಇಲ್ಲ. ಹಾಗಾಗಿ ನಿತ್ಯವೂ ಕೆಲಸ ಇದ್ದೇ ಇರುತ್ತದೆ. ಬ್ಯಾಂಕಿಂಗ್ ಆದರೆ ಮುಂದೆ ಓದಿಗೆ ವ್ಯವಸ್ಥೆ ಮಾಡಿಕೊಳ್ಳಬೇಕಿದೆ. ಅದಕ್ಕಾಗಿ ಯಾವ ತಯಾರಿಯನ್ನೂ ಮಾಡಕೊಂಡಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಎರಡನ್ನೂ ನಿಭಾಯಿಸುವುದು ಕಷ್ಟ ಎಂದು ಗೊತ್ತು. ಹಾಗೆಂದು ಪ್ರಯತ್ನದಿಂದ ವಿಮುಖವಾಗುವ ಮಾತೇ ಇಲ್ಲ.

ಪ್ರಾಥಮಿಕವಾಗಿ ಒಂದಿಷ್ಟು ಯೋಜನೆಯನ್ನು ಹಾಕಿಕೊಂಡಿದ್ದೇನೆ. ನನಗೆ ಅರ್ಥಶಾಸ್ತ್ರ (ಎಕನಾಮಿಕ್ಸ್) ಮತ್ತು ಲೆಕ್ಕಶಾಸ್ತ್ರ (ಅಕೌಂಟೆನ್ಸಿ) ಆಸಕ್ತಿಯ ವಿಷಯಗಳು. ಅವುಗಳನ್ನೇ ಐಚ್ಛಿಕ ವಿಷಯವಾಗಿ ಓದಬೇಕು ಎಂದುಕೊಂಡಿದ್ದೇನೆ. ಸದ್ಯ ಚಿತ್ರೀಕರಣದಲ್ಲಿ ಬಿಜಿ ಆಗಿರುವುದರಿಂದ ನನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಆಗುತ್ತಿಲ್ಲ. ಶೂಟಿಂಗ್‌ನಲ್ಲಿ ಸ್ವಲ್ಪ ಬ್ರೇಕ್ ಸಿಕ್ಕಾಗ ಆ ಬಗ್ಗೆ ಕೂಡ ಗಮನ ಕೊಡುತ್ತೇನೆ.

◆ **ಕೊರೊನಾದಿಂದ ಧಾರಾವಾಹಿಗೆ ತೊಂದರೆಯಾಗುತ್ತಿದೆಯಲ್ಲ...**

ಶೂಟಿಂಗ್ ನಿಲ್ಲಿಸಲು ಸರ್ಕಾರ ಆದೇಶ ನೀಡಿದೆ. ಜನಹಿತದ ದೃಷ್ಟಿಯಿಂದ ಸರ್ಕಾರದ ಕಾನೂನನ್ನು ಪಾಲಿಸಬೇಕು. ಸದ್ಯದ ಪರಿಸ್ಥಿತಿಯಲ್ಲಿ ತೊಂದರೆ ಇಲ್ಲ. ಒಂದಿಷ್ಟು ದಿನಗಳ ಪ್ರಸಾರಕ್ಕೆ ಸಮಸ್ಯೆ ಆಗಲಾರದು ಎಂದೆನಿಸುತ್ತದೆ. ಕೊರೊನಾ ವೈರಸ್ ಕೂಡ ಸಮುದಾಯಿಕವಾಗಿ ಹಬ್ಬುತ್ತಿದೆ. ಚಿತ್ರೀಕರಣ ಬಂದ್ ಮಾಡಿರುವುದು ಅನಿವಾರ್ಯ.

◆ **ನಿಮ್ಮ ಹವ್ಯಾಸ ಅಭಿರುಚಿಗಳ ಬಗ್ಗೆ ಹೇಳುವುದಾದರೆ...**

ಬೆಳಿಗ್ಗೆ ಚೆನ್ನಾಗಿ ನೀರು ಕುಡಿಯುತ್ತೇನೆ. ವಾಕ್ ಮಾಡ್ತೀನಿ ಜೊತೆಗೆ ಯೋಗಾಭ್ಯಾಸವನ್ನೂ ಮಾಡುತ್ತೇನೆ. ನಂತರ ತಿಂಡಿ ತಿನ್ನುತ್ತೇನೆ. ತಿಂಡಿ ಅಂದರೆ ಬರೀ ಹಣ್ಣುಗಳು. ಸಮಯ ಸಿಕ್ಕರೆ ಷಟಲ್ ಆಡುತ್ತೇನೆ, ಈಜಾಡುತ್ತೇನೆ. 11 ಗಂಟೆಗೆ ಸ್ವಲ್ಪ ಡ್ರೈ ಫ್ರೂಟ್ಸ್ ತಿನ್ನುತ್ತೇನೆ. ಮಧ್ಯಾಹ್ನ ಊಟವನ್ನು ಚೆನ್ನಾಗಿ ಮಾಡುತ್ತೇನೆ. ಸಂಜೆ ಗ್ರೀನ್ ಟೀ ಕುಡಿಯುತ್ತೇನೆ ಜೊತೆಗೆ ಲೈಟಾಗಿ ಏನಾದರೂ ಸ್ನ್ಯಾಕ್ಸ್ ತಿನ್ನುತ್ತೇನೆ. ರಾತ್ರಿ ಊಟದ ಜೊತೆಗೆ ಚಿಕನ್ ತೆಗೆದುಕೊಳ್ಳುತ್ತೇನೆ. ತಿನ್ನುವುದು ಮಾತ್ರ ಅಲ್ಲ, ಅಡುಗೆಯನ್ನೂ ಮಾಡುತ್ತೇನೆ. ವೆಜಿಟೆಬಲ್ ಫ್ರೈಡ್ ರೈಸ್ ತುಂಬಾ ಚೆನ್ನಾಗಿ ಮಾಡುತ್ತೇನೆ. ನಾನು ಮಾಡುತ್ತೇನೆ ಅಂದರೆ ನಮ್ಮ ಮನೆಯವರು ಕಾಯುತ್ತಾರೆ. ನಾನು ಮಾಡುವುದು ಅಷ್ಟು ಚೆನ್ನಾಗಿರುತ್ತದೆ. ಸ್ವತಃ ನಾನೂ ಅದನ್ನು ಇಷ್ಟಪಟ್ಟು ತಿನ್ನುತ್ತೇನೆ. ಹಾಗೆಂದು ರೆಸಿಪಿ ಹೇಳುವುದಿಲ್ಲ. ಆ ರಹಸ್ಯವನ್ನು ಬಿಟ್ಟು ಕೊಡಬಾರದು.

◆ **ಜೊತೆ ಜೊತೆಯಲ್ಲಿ ಬಗ್ಗೆ ಹೇಳುವುದಾದರೆ...**

ಇದು ನನಗೆ ದೊಡ್ಡ ಸವಾಲಾಗಿತ್ತು ಎನ್ನುವುದಕ್ಕೆ ಅನುಮಾನ ಇಲ್ಲ. ಅನುಭವಿಗಳು ಹಾಗೂ ದೊಡ್ಡ ನಟರ ಎದುರು ನಾನು ನಿಲ್ಲಬೇಕಿತ್ತು. ಒಂದು ರೀತಿಯಲ್ಲಿ ನನ್ನ ಎದುರಿಗಿದ್ದ ಸವಾಲನ್ನು ಗೆದ್ದಿದ್ದೇನೆ ಎಂದು ಅನ್ನಿಸುತ್ತದೆ. ದೇಶ– ವಿದೇಶಗಳ ಕನ್ನಡಿಗರು ನನಗೆ ಪ್ರೀತಿಯಿಂದ ಪ್ರೋತ್ಸಾಹದ ಮಾತುಗಳನ್ನು ಹೇಳುತ್ತಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಕೊಂಡಾಡುತ್ತಾರೆ. ಮುಂದೆ ಕೂಡ ಹೊಸ ಹೊಸ ಪ್ರತಿಭೆಗಳನ್ನು ಅವರು ಹೀಗೆ ಪ್ರೋತ್ಸಾಹಿಸಲಿ ಎಂದು ಪ್ರಾರ್ಥಿಸುತ್ತೇನೆ.

◆ **ನಟನೆಯ ತಾಲೀಮಿನ ಬಗ್ಗೆ ಹೇಳಿ...**

ಎಂಬಿಎ ಪರೀಕ್ಷೆ ನಡಿತಾ ಇತ್ತು. ಪರೀಕ್ಷೆ ಮುಗಿದ ತಕ್ಷಣ ಚಿತ್ರೀಕರಣ ನಿಶ್ಚಿತವಾಗಿತ್ತು. ನಾನು ನಟಿಸುವುದು ಖಚಿತವಾಗಿತ್ತು. ನಟನೆ ಮಾಡಿ ಅಭ್ಯಾಸ ಇರಲಿಲ್ಲ. ಹಾಗಾಗಿ ಪರೀಕ್ಷೆಯ ನಡುವೆ ಇದ್ದ ಗ್ಯಾಪ್‌ನಲ್ಲೇ ನಿರ್ದೇಶಕ ಆರೂರು ಜಗದೀಶ್ ಅಭಿನಯ ಕಾರ್ಯಾಗಾರ ಮಾಡಿದರು. ಅವರ ಜೊತೆ ಜಯಂತ್, ಸುದೀಪ್ ಹೀಗೆ ಕೆಲವರು ನಟನೆಯನ್ನು ಹೇಳಿಕೊಟ್ಟರು. ಜೊತೆಗೆ ಪಾತ್ರವನ್ನು ಪರಿಚಯಿಸಿ ನನ್ನನ್ನು ತಯಾರುಮಾಡಿದರು. ಕೇವಲ 15 ದಿನಗಳ ಅವಧಿಯಲ್ಲಿ ತುಂಬ ಹೇಳಿಕೊಟ್ಟರು. ಅದರಿಂದಲೇ ನಾನು ಸುಲಭವಾಗಿ ಕ್ಯಾಮೆರಾವನ್ನು ಎದುರಿಸಲು ಸಾಧ್ಯವಾಯಿತು.

■ **ರಾಘವೇಂದ್ರ ಕೆ.**

ಚಿತ್ರ: ರಂಜು ಪಿ